RPAI

OFFICE OF THE REGISTRAR OF CHITS IN KARNATAKA BANGALORE

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ಪ್ರಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.**

ಸಂಖ್ಯೆ: ಆರ್‌ಸಿಎಸ್/ಎನ್‌ಎಂಎಲ್-2/ ವೈಎಂಸಿ/ 01 /2024-25 ದಿನಾಂಕ: 06 -04-2024

| | |
|---|---|
| ವಿಷಯ: | ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3), ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ, ಕೋಟ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ- 576221 ಈ ವಿಳಾಸದಲ್ಲಿ ಹೊಸದಾಗಿ ಚೀಟಿ ವ್ಯವಹಾರ ನಡೆಸಲು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರಡಿ ಅನುಮತಿ ನೀಡುವ ಬಗ್ಗೆ. |
| ಉಲ್ಲೇ | ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ, ಇವರ ಪತ್ರ ಸಂಖ್ಯೆ. ಡಿಆರ್‌ಪಿ/ ಉ/ ಆಡಳಿತ/ ಚೀ.ನಿ/ ನೋಂ./03/ 2023-24 ದಿನಾಂಕ: 18-03-2024 |

***

**ಪ್ರಸ್ತಾವೆ:**

ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3), ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ, ಕೋಟ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ- 576221 ಇಲ್ಲಿ ಹೊಸದಾಗಿ, ಚೀಟಿ ವ್ಯವಹಾರ ನಡೆಸಲು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರಡಿ ಅನುಮತಿ ಕೋರಿ ಉಲ್ಲೇಖದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ, ಇವರು ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿದೆ. ಈ ಸಂಸ್ಥೆಯು ಚೀಟಿ ನಿಧಿಗಳ ಕಾಯ್ದೆ 1982ರ ಅವಕಾಶಗಳಿಗೆ ಒಳಪಟ್ಟು ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ ಇವರು ಸ್ಥಳ ಪರಿಶೀಲನೆ ನಡೆಸಿ, ಸ್ಥಳವು ಚೀಟಿ ವ್ಯವಹಾರ ನಡೆಸಲು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯಿಸಿ ವರದಿಸಿರುತ್ತಾರೆ, ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳ ವಿವರಗಳು ಕೆಳಕಂಡಂತಿದೆ.

| | | |
|---|---|---|
| 1 | ಹೆಸರು ಮತ್ತು ವಿಳಾಸ | ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3), ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ, ಕೋಟ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ- 576221 |
| 2 | ಕಂಪೆನಿ ನೋಂದಣಿ ವಿವರ | ಕಂಪನಿ ನೋಂದಣಿ ವಿವರ ಕಂಪನಿ ಕಾಯ್ದೆ 2013ರ ರೀತ್ಯಾ ದಿನಾಂಕ: 09-03-2024 ರಂದು ನೋಂದಣಿಯಾಗಿರುತ್ತದೆ. ನೋಂದಣಿ ಸಂಖ್ಯೆ: U64990KA2024PTC185968 |
| 3 | PAN ಸಂಖ್ಯೆ | ABACA3188M |
| 4 | TAN ಸಂಖ್ಯೆ | BLRA49139G |
| 5 | GST ಸಂಖ್ಯೆ | - |

| | | | | |
|---|---|---|---|---|
| 6 | **ನಿರ್ದೇಶಕರು/ಪದಾಧಿಕಾರಿಗಳ ವಿವರ:** | | | |
| | ಸಂ | ಹೆಸರು | ಹುದ್ದೆ | ವಿಳಾಸ |
| | 1 | ವಿ.ಹರೀಶ | ನಿರ್ದೇಶಕರು | ಬಿನ್ ಆನಂದ , ನಂ.9-216ಇ, ಗುರುಕೃಪ, ಎಕೆಜಿ ರಸ್ತೆ, ವಡೇರ ಹೋಬಳಿ, ಕುಂದಾಪುರ, ಉಡುಪಿ-576201 |
| | 2 | ಯೋಗೇಂದ್ರ ತಿಂಗಳಾಯ | ನಿರ್ದೇಶಕರು | ಬಿನ್ ಶಂಕರ, ನಂ.5-80,ಪವಿತ್ರ ನಿಲಯ, ಕೋಟತಟ್ಟು ,ಪಡುಕರೆ, ಉಡುಪಿ- 576221 |
| | 3 | ನರೇಂದ್ರ | ಫೋರ್‌ಮನ್ | ನಂ.4-1ಬಿ, ಪರಂಪಳ್ಳಿ, ಸಾಲಿಗ್ರಾಮ, ಬ್ರಹ್ಮಾವರ, ಉಡುಪಿ- 576225 |
| | ಷೇರು ಬಂಡವಾಳ | | ರೂ.10.00 ಲಕ್ಷ | |
| 7 | ಚೀಟಿ ನಡೆಸಲು ಹೂಡಿರುವ ಬಂಡವಾಳ ಹಾಗು ಬ್ಯಾಂಕ್ ವಿವರ | | ದಿ.ಉಡುಪಿ ಕೋ-ಆಪ್‌ರೇಟಿವ್ ಟೌನ್ ಬ್ಯಾಂಕ್ ಲಿ.,, ಉಡುಪಿ ಶಾಖೆ, .ಖಾತೆ ಸಂ:004141500000023 ರಲ್ಲಿ ದಿನಾಂಕ: 15-03-2024 ಕ್ಕೆ ರೂ.1,01,000-00/-ಗಳ (ರೂಪಾಯಿಗಳು ಒಂದು ಲಕ್ಷ ಒಂದು ಸಾವಿರ ಮಾತ್ರ) ಹೊಂದಿರುತ್ತದೆ. | |
| 8 | ಕ್ರಿಮಿನಲ್ ಪ್ರಕರಣಗಳ ಬಗ್ಗೆ ವಿವರ | | ಫೋರ್‌ಮನ್ ಹಾಗೂ ನಿರ್ದೇಶಕರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿಲ್ಲದಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ನೀಡಿರುತ್ತಾರೆ. | |
| 9 | ಫೋರ್‌ಮನ್ ನೇಮಕದ ಬಗ್ಗೆ | | ಫೋರಮನ್ ನೇಮಕ ಮಾಡಿಕೊಂಡಿರುವ ಬಗ್ಗೆ ದಿನಾಂಕ: 11-03-2024 ರ ಸಭಾ ನಡವಳಿ ಸಲ್ಲಿಸಿರುತ್ತಾರೆ. | |

ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ, ರವರ ಶಿಫಾರಸ್ಸು ಆಧರಿಸಿ, ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3), ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ, ಕೋಟ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ- 576221 ಇಲ್ಲಿ ಹೊಸದಾಗಿ ಶಾಖೆ ತೆರೆದು, ಚೀಟಿ ಅಧಿನಿಯಮ 1982 ರ ಪ್ರಕರಣ 19(1) ಪ್ರಕಾರ ಚೀಟಿ ವ್ಯವಹಾರ ಪ್ರಾರಂಭಿಸಲು ಷರತ್ತುಬದ್ಧ ಅನುಮತಿ ನೀಡುವ ಕುರಿತು ಈ ಕೆಳಕಂಡ ಆದೇಶ.

## ಆ ದೇ ಶ

ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕ್ಯಾಪ್ಟನ್ ಡಾ.ಕೆ. ರಾಜೇಂದ್ರ ಭಾ.ಆ.ಸೇ., ಸಹಕಾರ ಸಂಘಗಳ ನಿಬಂಧಕರು, ಹಾಗೂ ಚೀಟಿ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಆದ ನಾನು ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3), ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ, ಕೋಟ, ಬ್ರಹ್ಮಾವರ

ತಾಲ್ಲೂಕು, ಉಡುಪಿ ಜಿಲ್ಲೆ- 576221 ಇಲ್ಲಿ ಹೊಸದಾಗಿ ಶಾಖೆ ತೆರೆದು, ಚೀಟಿ ವ್ಯವಹಾರ ನಡೆಸಲು ಇದರ ಫೋರ್‌ಮನ್ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುತ್ತೇನೆ.

**"ಷರತ್ತುಗಳು"**

1. ಚೀಟಿ ನಿಧಿಗಳ ಕಾಯ್ದೆ 1982ರ ಕಲಂ 19(1)ರ ಈ ಅನುಮತಿಯು ಚೀಟಿ ವ್ಯವಹಾರ ಪ್ರಾರಂಭಿಸಲು ಮಾತ್ರ ಸೀಮಿತವಾಗಿದ್ದು ಚೀಟಿ ಗುಂಪು ರಚನೆಗೆ ಚೀಟಿ ಗುಂಪು ಮೊತ್ತಕ್ಕೆ ಅನುಗುಣವಾಗಿ ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಉಪನಿಬಂಧಕರು/ಸಹಕಾರ ಸಂಘಗಳ ಸಹಾಯಕ ನಿಬಂಧಕರವರಿಂದ ಅನುಮತಿ ಪಡೆದು ಚೀಟಿ ಗುಂಪು ಪ್ರಾರಂಭಿಸಬೇಕಾಗಿರುತ್ತದೆ.

2. ಈ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ಹಾಗೂ ನಿಯಮಗಳು 1983 ರನ್ವಯ ಚೀಟಿ ವ್ಯವಹಾರವನ್ನು ಮಾತ್ರ ನಡೆಸುವುದು. ಚೀಟಿ ನಿಧಿ ಕಾಯ್ದೆ 1982 ರ ಪ್ರಕರಣ (3)ಕ್ಕೆ ಪೂರಕವಾಗುವಂತೆ ಕಂಪನಿಯು ಮೆಮೋರಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಪೂರ್ವಾನುಮತಿ ಇಲ್ಲದೇ ಬದಲಾವಣೆ ಮಾಡತಕ್ಕದ್ದಲ್ಲ.

3. ಚೀಟಿ ನಿಧಿ ಕಾಯ್ದೆ ನಿಯಮ ಉಲ್ಲಂಘನೆಯಾಗಿರುವುದಿಲ್ಲವೆಂಬ ಮಾಹಿತಿಯನ್ನು ಪ್ರತಿ ಚೀಟಿ ಗುಂಪು ಪ್ರಾರಂಭಿಸುವಾಗ ಮತ್ತುಕೊನೆಯಲ್ಲಿ ಭದ್ರತಾ ಠೇವಣಿ ಬಿಡುಗಡೆ ಸಂದರ್ಭದಲ್ಲಿ ಸಂಬಂಧಿತ ಪ್ರಾಧಿಕಾರಕ್ಕೆ ನೀಡತಕ್ಕದ್ದು.

4. ಸದರಿ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 4(1)ರ ಪ್ರಕಾರ ಚೀಟಿ ಗುಂಪುಗಳಿಗೆ ಪೂರ್ವ ಮಂಜೂರಾತಿ ಹಾಗೂ ಪ್ರಕರಣ 9(2)ರಂತೆ ಪ್ರಾರಂಭಿಕ ದೃಢೀಕರಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ವ್ಯವಹರಿಸತಕ್ಕದ್ದು.

5. ಚೀಟಿ ನಿಧಿ ಅಧಿನಿಯಮ 1982 ಪ್ರಕರಣ 12ರ ಪ್ರಕಾರಚೀಟಿ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ ಈ ಆದೇಶವನ್ನು ರದ್ದುಗೊಳಿಸಲಾಗುವುದು.

6. ಈ ಅನುಮತಿ ಆದೇಶಕ್ಕೆ ಲಗತ್ತಿಸಿರುವ ನಮೂನೆ-1 ರ ಮಾಹಿತಿಯನ್ನು ಈ ಅನುಮತಿ ಹೊರಡಿಸಿದ ಒಂದು ತಿಂಗಳೊಳಗಾಗಿ ಉಳಿತಾಯ ಖಾತೆ ಸಂಖ್ಯೆ ಒಳಗೊಂಡಂತೆ ಈ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನು, ಬದಲಾವಣೆಗೊಂಡ 2 ತಿಂಗಳೊಳಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು, ತಪ್ಪಿದಲ್ಲಿ ಈ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುವುದೆಂದು ತಿಳಿಯತಕ್ಕದ್ದು.

7. ನಿಬಂಧಕರು ಕಾಲ ಕಾಲಕ್ಕೆ ಹೊರಡಿಸುವ ನಿರ್ದೇಶನ/ಮಾರ್ಗಸೂಚಿ ಹಾಗೂ ಚೀಟಿ ನಿಧಿ ಅಧಿನಿಯಮ 1982 ಮತ್ತು ನಿಯಮಾವಳಿ 1983 ಕ್ಕೆ ತಿದ್ದುಪಡಿಯಾದ 3 ತಿಂಗಳೊಳಗಾಗಿ ಕಂಪನಿ ಅಳವಡಿಸಿಕೊಳ್ಳಲು ಬದ್ಧವಾಗಿರತಕ್ಕದ್ದು, ತಪ್ಪಿದಲ್ಲಿ ನೀಡಲಾದ ಅನುಮತಿಯನ್ನು ಯಾವುದೇ ಸಮಯದಲ್ಲಿ ರದ್ದು ಪಡಿಸಲಾಗುವುದೆಂದು ತಿಳಿಯತಕ್ಕದ್ದು.

8. ಈ ಅನುಮತಿ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ಸಂಸ್ಥೆಯು ಚೀಟಿ ವ್ಯವಹಾರವನ್ನು ಕೈಗೊಳ್ಳದಿದ್ದಲ್ಲಿ ಕಲಂ 19(1) ರ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

9. ಚೀಟಿ ನಿಧಿಗಳ ಕಾಯ್ದೆ ಕಲಂ 13ರ ಅವಕಾಶದಲ್ಲಿ ತಿಳಿಸಿರುವ ಚೀಟಿಯ ಒಟ್ಟಾರೆ ಮೊತ್ತ (Aggregate chit amount) ನ್ನು ಮೀರದಂತೆ ಸಂಸ್ಥೆಯು ಚೀಟಿ ವ್ಯವಹಾರವನ್ನು ನಡೆಸತಕ್ಕದ್ದು. ಒಂದು ವೇಳೆ ಈ ಅವಕಾಶವು ಉಲ್ಲಂಘನೆಯಾದಲ್ಲಿ ಸಂಸ್ಥೆಯ ಸಂಬAಧಪಟ್ಟವರೆಲ್ಲರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು.

10.ಚೀಟಿ ನಿಧಿಗಳ ಕಾಯ್ದೆ 1982 ಕಲಂ 21ರ ಅವಕಾಶದಲ್ಲಿ ತಿಳಿಸಿರುವ ಸೋಡಿ ಪ್ರಮಾಣಕ್ಕಿಂತ ಹೆಚ್ಚಿನ ಮೊತ್ತದ ಸೋಡಿಯನ್ನು ಪಡೆದಲ್ಲಿ ಫೋರ್‌ಮನ್ ಮತ್ತು ಸಂಸ್ಥೆಯ ಎಲ್ಲಾ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

11.ಸಂಸ್ಥೆಯು ಚೀಟಿ ಕುರಿತಂತೆ ಯಾವುದೇ ಠೇವಣಿಯನ್ನು ಸಂಗ್ರಹಿಸುವಂತಿಲ್ಲ.

12.ಕಾರ್ಯವ್ಯಾಪ್ತಿ ನಿಬಂಧಕರು ಪ್ರತಿ ಚೀಟಿ ಗುಂಪುಗಳ ಭದ್ರತೆ ಮತ್ತು ಗುಂಪು ಕಾಲಾವಧಿ ಮುಗಿದ ನಂತರ ಭದ್ರತಾ ಮೊತ್ತ ವಾಪಸ್ಸು ಮಾಡುವಲ್ಲಿ ಕಾಯ್ದೆ ಮತ್ತು ನಿಯಮಗಳ ಅವಕಾಶ ಪಾಲನೆಯಾಗಿರುವುದು ಹಾಗೂ ಯಾವುದೇ ಚೀಟಿದಾರರಿಗೆ ಚೀಟಿ ಮೊತ್ತ ಬಾಕಿ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ಭದ್ರತಾ ಠೇವಣಿ ಮೊತ್ತವನ್ನು ಬಿಡುಗಡೆ ಮಾಡುವುದು. ತಪ್ಪಿದಲ್ಲಿ ಕಾರ್ಯವ್ಯಾಪ್ತಿ ನಿಬಂಧಕರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

13.ಕಾರ್ಯವ್ಯಾಪ್ತಿ ಸಹಾಯಕ ನಿಬಂಧಕರು/ಉಪ ನಿಬಂಧಕರು ತಮ್ಮ ವ್ಯಾಪ್ತಿಯಲ್ಲಿನ ಚೀಟಿ ಸಂಸ್ಥೆಯ ವ್ಯವಹಾರಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆ ಮಾಡತಕ್ಕದ್ದು.

14.ಚೀಟಿ ನಿಧಿಗಳ ಕಾಯ್ದೆ ಮತ್ತು ನಿಯಮಗಳ ಅವಕಾಶಗಳನ್ವಯ ಕಾಲಕಾಲಕ್ಕೆ ಸಲ್ಲಿಸಬೇಕಾದಂತಹ/ವರದಿಗಳು/ದಾಖಲೆ/ಮಾಹಿತಿ/ನಡವಳಿಗಳನ್ನು ಸಂಸ್ಥೆಯ ಫೋರ್‌ಮನ್, ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳೇ ಜವಾಬ್ದಾರಿ ಹೊಂದಿರುತ್ತಾರೆ.

15.ಚೀಟಿ ನಿಧಿಗಳ ಕಾಯ್ದೆ 1982 ಮತ್ತುಚೀಟಿ ನಿಧಿಗಳ ನಿಯಮಗಳು 1983ರ ಎಲ್ಲಾ ಅವಕಾಶಗಳನ್ನು ಸಂಸ್ಥೆಯು ಚಾಚೂ ತಪ್ಪದೆ ಪಾಲಿಸತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿ: 06 -04-2024 ರಂದು ಹೊರಡಿಸಿದೆ.

Signed by
K Rajendra
Date: 06-04-2024 11:56:26

(ಕ್ಯಾಪ್ಟನ್ ಡಾ.ಕೆ.ರಾಜೇಂದ್ರ, ಭಾ.ಆ.ಸೇ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ

ಫೋರ್‌ಮನ್,
ಅನುಸ್ತುಭ ಚಿಟ್ಸ್ ಪ್ರೈವೇಟ್ ಲಿಮಿಟೆಡ್., ಡೋರ್ ನಂ.1-39(3),
ರಜತಾದ್ರಿ ಕಾಂಪ್ಲೆಕ್ಸ್, ನೆಲಮಹಡಿ, ಕೋಟತಟ್ಟು ಗ್ರಾಮ,
ಕೋಟ, ಬ್ರಹ್ಮಾವರ ತಾಲ್ಲೂಕು,
ಉಡುಪಿ ಜಿಲ್ಲೆ- 576221

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ/ಕ್ರಮಕ್ಕಾಗಿ ರವಾನಿಸಿದೆ :**
1.ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ, ಉಡುಪಿ.
2.ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಂದಾಪುರ ಉಪ ವಿಭಾಗ, ಕುಂದಾಪುರ